ವ್ಯಾಖ್ಯಾನ

# <u>ನಗೆಯು ಬರುತಿದೆ</u>

**Ref.**: Haridasa Hrudaya, by Dr. A.B. Shamachar, published by Srimadwagrantha Prakashana, Bengaluru – 26 (2016), page No. 91.

**ನಗೆಯು ಬರುತಿದೆ, ಎನಗೆ**
**ನಗೆಯು ಬರುತಿದೆ || ಪ ||**

**ಜಗದೊಳಿರುವ ಮನುಜರೆಲ್ಲ**
**ಹಗರಣ ಮಾಡುವುದ ಕಂಡು || ಅಪ ||**

**ಪರರ ವನಿತೆಯೊಲುಮೆಗೊಲಿದು**
**ಹರುಷದಿಂದ ಅವಳ ಬೆರೆದು**
**ಹರಿವ ನೀರಿನೊಳಗೆ ಮುಳುಗಿ**
**ಬೆರಳ ಎಣಿಸುತಿಹರ ಕಂಡು || 1 II**

**ಪತಿಯ ಸೇವೆ ಬಿಟ್ಟು ಪರ**
**ಪತಿಯ ಕೂಡೆ ಸರಸವಾಡಿ**
**ಸತತ ಮೈಯ ತೊಳೆದು ಹಲವು**
**ವ್ರತವ ಮಾಳ್ಪ ಸತಿಯ ಕಂಡು || 2 II**

**ಕಾಮ ಕ್ರೋಧ ಮನದೊಳಿಟ್ಟು**
**ತಾನು ವಿಷಯ ಪುಂಜನಾಗಿ**
**ಸ್ವಾಮಿ ಪುರಂದರ ವಿಠ್ಠಲನ್ನ**
**ನಾಮ ನೆನೆಯುವವರ ಕಂಡು || 3 II**

ಶ್ರೀಪುರಂದರದಾಸರ ಅನುಭವದ ಮಾತುಗಳು. ನಿಷ್ಠುರದ ಮಾತಾದರೂ ಸತ್ಯವಾದ ಮಾತು. ಅವರ ಕಂಡು ನುಡಿದ ಮಾತು. ಜನರ ನಾಟಕೀಯ ಜೀವನದ ಅಂತರಾಳದ ಮಾತು. ಅಂತರಂಗ - ಬಹಿರಂಗಗಳನ್ನು ತೂಗಿ ಆಡಿದ ಮಾತುಗಳಿವು.

**ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ।**
**ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದನೆ ಕಂಡು ॥**

ಸಾಮಾನ್ಯವಾಗಿ ಜಗತ್ತಿನಲ್ಲಿ ಮನುಷ್ಯ ಒಂದಲ್ಲ ಒಂದು ರೀತಿಯಲ್ಲಿ ಹಗರಣದಲ್ಲಿ ಬಾಗಿಯಾಗಿರುವ. ಹೆಚ್ಚು ಬುದ್ಧಿವಂತನೆಂದರೆ ಹೆಚ್ಚು ಹಗರಣಿಗನಾಗುವ. ಹಗರಣವೆಂದರೆ ನಟನೆ, ತೋರಿಕೆ, ಬಿನ್ನಾಣದಿ ಮೋಸವೆಸಗುವುದು ಹೀಗೆ ... ದಾಸರು ಒಂದು ಕಡೆ 'ಹಾಕುವುದು ಸಾಧು ವೇಷ ಸಾಕುವುದು ಹಲವು ದೋಷ' ಎಂದಂತೆ ಇರುವುದನ್ನು ಕಂಡ ದಾಸರು ನಗೆಯು ಬರುತಿದೆ ಎಂದರು. ಇದಕ್ಕೆ ಅನುಸಾರಿಯಾದ ದಾಸರ ಮಾತು -

**ಹೀನ ಗುಣವ ಮನದೊಳಿಟ್ಟು ತಾನು ವಿಷದ ಪುಂಜನಾಗಿ**
**ಮೌನಿ ಪುರಂದರ ವಿಠಲನ್ನ ಧ್ಯಾನ ಮಾಡುವವನ ಕಂಡು ॥**
**ನಗೆಯು ಬರುತಿದೆ ....**

ಮನಸ್ಸಿನಲ್ಲಿ ದುಷ್ಟ ಚಿಂತನೆಗಳನ್ನು ಹೊತ್ತು ಒಳಗೆ ವಿಷತುಂಬಿಕೊಂಡು ಹೊರಗೆ ಅಂದರೆ ತೋರಿಕೆಗೆ ಗುಣವಂತನೆಂದು ಬಿಂಬಿಸಿಕೊಳ್ಳುವ ಜನರೆ ಬಹಳವೆಂದರು. ಇದನ್ನೆ ಬೂಟಾಟಿಕೆಯ ನಡತೆ ಎನ್ನುವರು. ಇದು ಕೆಲ ಪಂಡಿತರಲ್ಲೂ ಕಾಣುವ ಪ್ರವೃತ್ತಿಯಾಗಿದೆ. ಇದು ಮೋಸದ ಪ್ರವೃತ್ತಿ. ತಾತ್ಕಾಲಿಕಕ್ಕೆ ಹೆಮ್ಮೆ ಎನ್ನಿಸಿದರು ನಂತರ ಬಯಲಾಗದಿರದು. ಇದನ್ನೇ ಆತ್ಮವಂಚನೆ ಎನ್ನುವರು. ಇದು ಎಂದಿಗೂ ತಾರಕವಲ್ಲ. ಪುರಂದರರು ಈ ಬದುಕು ಆಶಾಶ್ವತ, ಅಷ್ಟರಲ್ಲಿ ಏನಾದರೂ ಗಳಿಸಿ ಉದ್ಧಾರವಾಗಿರೆನ್ನುವರು.

**'ನೀರ ಮೇಲಿನ ಗುಳ್ಳೆಗೆ ಸರಿ ಈ ಶರೀರ । ಸ್ಥಿರವೆಂದು ನಂಬದಿರೊ' ॥** ಎನ್ನುವರು.

ದಾಸರು ತಮ್ಮ ಜೀವನದುದ್ದಕ್ಕೂ ಸಮಾಜಕ್ಕೆ ಸ್ಪಂದಿಸಿ, ಇಲ್ಲಿನ ಅಂಕು ಡೊಂಕುಗಳನ್ನು ತಿದ್ದುವಲ್ಲಿ ಯಶಸ್ವಿಯಾದರು. ಅವರ ಮತ್ತೊಂದು ಮಾತು -

**'ತುದಿ ನಾಲಿಗೆ ಬೆಲ್ಲ ಎದೆ ಕತ್ತರಿಯವರ ಸಂಗ ಬೇಡ'**

**'ಒಳ್ಳೆ ಜನಗಳ ನಿಂದೆಯನು ಮಾಡಬೇಡ ।**

**ಒಳ್ಳೆಯವನೆಂದರೆ ಹಿಗ್ಗಬೇಡ' ।** ಎಂದದ್ದು ಮನದಲ್ಲಿ ನಾಟಬೇಕು.

ಹೀಗೆ ಸಮಾಜದಲ್ಲಿ ಡಂಬಕ ಜೀವನ ತೊರೆದು, ಅಂತಃಕರಣ ಶುದ್ಧಿ ಹೊಂದಿ ಬಾಳಲು ಸಂದೇಶವಿತ್ತರು. ಜ್ಞಾನಿಗಳ ಮುಂದೆ ನಗೆಗೆ ಒಳಗಾಗದಿರಿ ಎಂದರು.

ಒಟ್ಟಿನಲ್ಲಿ ದಾಸರ ಹಾರ್ದ ಹೀಗಿದೆ -

**'ಚಿತ್ತದಲಿ ಚರಣನಂಬಿದ ಜನರಿಗೆ**
**ನಿತ್ಯಾಯು ಉತ್ಸಾಹ ವಿಜಯವಿಟ್ಠಲನೀವ' ॥** – ಶ್ರೀ ವಿಜಯದಾಸರು

* * * * * *

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು (ಲೇಖಕರ ಅನುಮಾನತಿಯೊಂದಿಗೆ).